**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 58/2023 ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 2

| | |
|---|---|
| ಸಾಕ್ಷಿದಾರರ ಹೆಸರು | ರಿತೇಶ್ |
| ತಂದೆಯ ಹೆಸರು | ದಿನೇಶ್ |
| ವಯಸ್ಸು | 21 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಮುಲ್ಕಿ |

ದಿನಾಂಕಃ 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಚಾಸಾ-1, 3, 4, 5, ಗೊತ್ತು. ಚಾಸಾ-1 ಈತನ ಜಾತಿ ಗೊತ್ತಿಲ್ಲ. ನನಗೆ ಆರೋಪಿತರು ಗೊತ್ತಿಲ್ಲ. ಆರೋಪಿತರಿಂದ ಚಾಸಾ-1, 4, 5, ಇವರಿಗೆ ಆದ ಹಲ್ಲೆಯ ಬಗ್ಗೆ ಗೊತ್ತಿಲ್ಲ. ಚಾಸಾ-1 ಈತನಿಗೆ ಆರೋಪಿತರು ಮಾಡಿದ ಜಾತಿ ನಿಂದನೆಯ ಬಗ್ಗೆ ಗೊತ್ತಿಲ್ಲ. ಚಾಸಾ-1 ಆರೋಪಿತರ ಮೇಲೆ ಕೊಟ್ಟ ದೂರಿನ ಬಗ್ಗೆ ಮಾಹಿತಿ ಇಲ್ಲ. ಅದಕ್ಕಾಗಿ ನನ್ನನ್ನು ಪೊಲೀಸರು ವಿಚಾರಿಸಿಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನನಗೆ ಈಗ ತೋರಿಸಿದ ಪಂಚನಾಮೆಗಳಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದರಿ ಪಂಚನಾಮೆಗಳನ್ನು **ನಿಶಾನೆ ಪಿ-1 ಮತ್ತು 2** ಎಂದು ಗುರುತಿಸಿದೆ. ಅದರಲ್ಲಿರುವ ನನ್ನ ಸಹಿ ನಿಶಾನೆ ಪಿ-1(ಎ) ಮತ್ತು 2(ಎ) ಎಂದು ಗುರುತಿಸಿದೆ. ಆ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೆ, ಅವುಗಳನ್ನು ಯಾವಾಗ, ಯಾವ ಕಾರಣಕ್ಕೆ ಮಾಡಿದ್ದೆ ಎಂದು ಗೊತ್ತಿಲ್ಲ. ಅವುಗಳಲ್ಲಿರುವ ವಿಷಯ ಗೊತ್ತಿಲ್ಲ. ನಿಪಿ-1 ಮತ್ತು 2ರ ಸಮಯದಲ್ಲಿ ಪೊಲೀಸರು ಏನು ಜಪ್ತು ಮಾಡಿದ್ದರು ಎಂದು ಗೊತ್ತಿಲ್ಲ.

ನನಗೆ ಈಗ ತೋರಿಸಿದ ಫೋಟೋಗಳಲ್ಲಿ ನಾನು ಇದ್ದೇನೆ. ಆ ಫೋಟೋಗಳನ್ನು ಒಟ್ಟಾಗಿ **ನಿಶಾನೆ ಪಿ- 3** ಎಂದು, ಇನ್ನೊಂದು ಫೋಟೋವನ್ನು **ನಿಶಾನೆ ಪಿ-4** ಎಂದು ಗುರುತಿಸಿದೆ. ಆ ಫೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದರು ಎಂದು ಗೊತ್ತಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ತಾರೀಕು 18-06-2023 ರಂದು ರಾತ್ರಿ 8.50 ರ ಸಮಯಕ್ಕೆ ನಾನು, ಚಾಸಾ-3 ಮತ್ತು ಆರೋಪಿತರು ಕ್ರಿಕೆಟ್ ಆಡಿ ಪಲಿಮಾರಿನ ಹಸ್ತಪಡ್ಪು ಮೈದನಾದಲ್ಲಿ ಮಾತನಾಡುತ್ತಾ ಇದ್ದೆವು ಎಂದರೆ ಸರಿಯಲ್ಲ. ಆಗ ಅಲ್ಲಿಗೆ ಮೋಟಾರ್ ಸೈಕಲ್ ನಲ್ಲಿ ಬಂದಿದ್ದ ಚಾಸಾ-1, 4, 5, ಅವರನ್ನು ಆರೋಪಿತರು ಅಡ್ಡಗಟ್ಟಿ, 2 ಮತ್ತು 3 ನೇ ಆರೋಪಿತರು, ಚಾಸಾ-1 ಇವರನ್ನು ಉದ್ದೇಶಿಸಿ ನೀನು ಕೀಳು ಜಾತಿಗೆ ಹುಟ್ಟಿದವನು, ಬೇವರ್ಸಿ ಎಂದು ಬೈದು, ಆತನ ರಟ್ಟೆಯನ್ನು ಹಿಡಿದು, ಬೈಕ್ ನಿಂದ ಕೆಳಗೆ ಇಳಿಸಿ, ಎಳೆದು ಹಾಕಿದರು ಎಂದರೆ ಸರಿಯಲ್ಲ. 2 ನೇ ಆರೋಪಿ ಮರದ ದೊಣ್ಣೆಯಿಂದ ಚಾಸಾ-1 ಇವರಿಗೆ ಬೆನ್ನಿಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ-1 ಮತ್ತು 5 ಇವರಿಗೆ, ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-4 ಬಿಡಿಸಲು ಬಂದಾಗ, 1 ನೇ ಆರೋಪಿ ಬಿಯರ್ ಬಾಟಲಿಯಿಂದ ಚಾಸಾ-4 ಇವರ ಬಲಕೈಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಮೂರು ಜನ ಆರೋಪಿತರು ಚಾಸಾ-4 ಇವರಿಗೆ ಕೈಗಳಿಂದ ಹೊಡೆದು, ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಆರೋಪಿತರು ಚಾಸಾ-1, 4, 5, ಇವರಿಗೆ ನಿಮ್ಮನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಲಾಟೆಯ ಸಮಯದಲ್ಲಿ ಚಾಸಾ-1 ಇವರ ಟೀ ಶರ್ಟ್ ಹರಿದು ಹೋಗಿರುತ್ತದೆ ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ-1 ಮತ್ತು 4 ಇವರನ್ನು ನಾನು ರಿಕ್ಷಾದಲ್ಲಿ ಕಾರ್ಕಳ ಸರಕಾರಿ ಆಸ್ಪತ್ರೆಗೆ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕಾಗಿ ಈಗ ಓದಿದ

ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-5** ಎಂದು ಗುರುತಿಸಿದೆ.

2) ದಿನಾಂಕ 20-06-2023 ರಂದು ಸಂಜೆ 4 ರಿಂದ 5.00 ಗಂಟೆಯ ಸಮಯದಲ್ಲಿ ಪೊಲೀಸರು ಸ್ಥಳ ತನಿಖೆಗೆ ಬಂದಾಗ, ನಾನೇ ಸ್ಥಳ ತೋರಿಸಿ ಕೊಟ್ಟ ಮೇರೆಗೆ ಚಾಸಾ-6 ಮತ್ತು 7 ರವರ ಸಮಕ್ಷಮ ನಿಪಿ-1 ರ ಪಂಚನಾಮೆ ಬರೆದು, ಸ್ಥಳದಲ್ಲಿದ್ದ ಮರದ ದೊಣ್ಣೆ ಮತ್ತು ಬಿಯರ್ ಬಾಟಲಿಯನ್ನು ವಶಪಡಿಸಿಕೊಂಡು , ನಿಶಾನೆ ಪಿ-1 ರ ಮಹಜರನ್ನು ದಾಖಲಿಸಿ, ಓದಿ ಹೇಳಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಆಗ ನಿಪಿ-3 ರ ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

3) ತಾರೀಕು 05-07-2023 ರಂದು ಸಂಜೆ 4 ರಿಂದ 4.30 ಗಂಟೆಯ ಸಮಯದಲ್ಲಿ ನನ್ನ ಮತ್ತು ಚಾಸಾ-8 ಇವರ ಸಮಕ್ಷಮ, ಚಾಸಾ-1 ಹಾಜರುಪಡಿಸಿದ ಟೀ ಶರ್ಟ್ ನ್ನು ಪೊಲೀಸರು ಪಡೆದಿದ್ದರು ಎಂದರೆ ಗೊತ್ತಿಲ್ಲ. ಅದಕ್ಕಾಗಿ ನಿಪಿ-2 ರ ಪಂಚನಾಮೆಯನ್ನು ಬರೆದು, ಓದಿ ಹೇಳಿ ನನ್ನ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ಆಗ ನಿಪಿ-4 ರ ಫೋಟೋ ತೆಗೆದಿದ್ದರು ಎಂದರೆ ಸರಿಯಲ್ಲ.

4) ನಾನು ಆರೋಪಿತರಿಂದ ಆದ ಹಲ್ಲೆಯ ಬಗ್ಗೆ ಮತ್ತು ನಂತರ ಪೊಲೀಸರು ಬಂದಾಗ ಮಾಡಿದ ಪಂಚನಾಮೆಯ ಬಗ್ಗೆ ತಿಳಿದಿದ್ದರೂ ಸಹ, ಈಗ ಆರೋಪಿತರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಆಗ ನಿಪಿ-3 ರ ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

**ಪಾಟೀಸವಾಲು: ಆರೋಪಿತರ ಪರವಾಗಿ ಶ್ರೀ ಎಸ್.ಎ. ವಕೀಲರಿಂದ ಇಲ್ಲ**

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.